ಇಂದು ದಿ**: 03.08.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿವಾದಿಯ ಪರಃ ಶ್ರೀ ಎಸ್.ಎಂ., ವಕೀಲರಿಂದ

ಈ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಆರ್.ಎಸ್.ಎ ಯಾವಾಗ ಇತ್ಯರ್ಥಗೊಂಡಿರುತ್ತದೆ ಎಂದು ನೆನಪು ಇರುವುದಿಲ್ಲ. ನಮ್ಮ ಚಿಕ್ಕಪ್ಪ ದೊಡ್ಡಪ್ಪ ಇವರ ಮೇಲೆ ಸಲ್ಲಿಸಿದ ದಾವೆಯ ಮೇಲಿನ ಮೇಲ್ಮನವಿ ಯಾವಾಗ ಇತ್ಯರ್ಥ ಆಗಿರುತ್ತದೆ ಎಂದು ಹೇಳಲು ಆಗುವುದಿಲ್ಲ. ಮೂಲ ದಾವೆ ನಂ. 70/1977 ರ ಮೇಲಿನ ಮೇಲ್ಮನವಿ ಮುಗಿದ ನಂತರ ಸ್ವಾಧೀನವನ್ನು ತೆಗೆದುಕೊಳ್ಳಲು ಅಮಲ್ಜಾರಿ ಅರ್ಜಿಯನ್ನು ಯಾವಾಗ ಸಲ್ಲಿಸಿರುತ್ತೇನೆ ಎಂದು ನೆನಪು ಇರುವುದಿಲ್ಲ. ಸದರಿ ಅಮಲ್ಜಾರಿ ಅರ್ಜಿಯನ್ನು ಸಲ್ಲಿಸುವ ಮೊದಲು ದಾವಾ ಸ್ವತ್ತು ನಮ್ಮ ಚಿಕ್ಕಪ್ಪ ಇವರ ಸ್ವಾಧೀನತೆಯಲ್ಲಿತ್ತು ಎನ್ನುವುದು ನಿಜ. ಸದರಿ ಅಮಾಲ್ಜಾರಿ ಅರ್ಜಿಯಲ್ಲಿನ ಆದೇಶದಂತೆ ದಾವಾ ಆಸ್ತಿಯ ಸ್ವಾಧೀನತೆಯನ್ನು ನನಗೆ ಮತ್ತು ನಮ್ಮ ಅಣ್ಣನಿಗೆ ನ್ಯಾಯಾಲಯದ ಅಮೀನರು ಕೊಡಿಸಿರುತ್ತಾರೆ ಎನ್ನುವುದು ನಿಜ. ನಮ್ಮ ಚಿಕ್ಕಪ್ಪ ಇವರಿಗೆ ಖಾತೆ ಆಗಿರುವುದನ್ನು ಪ್ರಶ್ನೆ ಮಾಡಿ ನಾವು ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ ಎಂದರೆ ಸಾಕ್ಷಿ ನಮ್ಮ ಚಿಕ್ಕಪ್ಪ ಹಾಗೂ ನಮ್ಮ ಅಣ್ಣನ ವಿರುದ್ಧ ಎ.ಸಿ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದು ಹೇಳುತ್ತಾರೆ. ಸದರಿ ಎ.ಸಿ ನ್ಯಾಯಾಲಯದ ಮೇಲ್ಮನವಿಯು ದಿಃ 30.10.1993 ರಲ್ಲಿ ಇತ್ಯರ್ಥವಾಗಿರುತ್ತದೆ ಎನ್ನುವುದು ನಿಜ. ಪಾಲು ಪಾರಿಕತ್ ನಲ್ಲಿ ದಾವಾ ಆಸ್ತಿ ನಮ್ಮ ಅಣ್ಣನ ಮಕ್ಕಳಿಗೆ ಸೇರಿತ್ತು ಎಂದು ಬರೆದಿಲ್ಲ. ಸದರಿ ಆಸ್ತಿಯ ಮೇಲೆ ನಮ್ಮಅಣ್ಣನ ಮಕ್ಕಳಿಗೆ ಹಕ್ಕು ಅಧಿಕಾರ ಇತ್ತು ಎಂದರೆ ಸರಿಯಲ್ಲ. ಅವರಿಗೆ ಸೇರಿದ ಹಿಸ್ಸೆಯ ಹಕ್ಕನ್ನು ನಮ್ಮ ಅಣ್ಣ ನನಗೆ ಬಿಟ್ಟು ಕೊಡಲು ಹಕ್ಕನ್ನು ಹೊಂದಿಲ್ಲ ಎಂದರೆ ಸಾಕ್ಷಿ ಪಾಲು ವಿಭಾಗ ಮಾಡಿಕೊಂಡಿರುತ್ತೇವೆ ಎಂದು ಹೇಳುತ್ತಾರೆ. ಸದರಿ ಪಾಲು ವಿಭಾಗ ಪತ್ರದಲ್ಲಿ ನಮ್ಮಅಣ್ಣನ ಹಿಸ್ಸೆ ಯಾವ ಭಾಗದ್ದು ಎಂದು ಬರೆದಿಲ್ಲ. ನನಗೆ ಬರೆದುಕೊಟ್ಟ ಹಕ್ಕು ಖುಲಾಸೆ ಪತ್ರ ನೊಂದಣಿ ಆಗಿರುವುದಿಲ್ಲ. ನಾನು ಎ ಸಿ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಮೇಲ್ಮನವಿ ಮುಕ್ತಾಯಗೊಳ್ಳುವ ಪೂರ್ವದಲ್ಲಿ ನಾನು ಪಾಲು ವಿಭಾಗ ಪತ್ರವನ್ನು ಸೃಷ್ಟಿ ಮಾಡಿದ್ದೆ ಎಂದರೆ ಸರಿಯಲ್ಲ. ಪಾಲು ವಿಭಾಗ ಪತ್ರ ಪೂರ್ಣ ಇರುವುದಿಲ್ಲ ಎಂದರೆ ಸರಿಯಲ್ಲ. ಪಾಲು ವಿಭಾಗ ಪತ್ರ ಮತ್ತು ಪ್ರಮಾಣ ಪತ್ರವನ್ನು ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

(ವೈ.ಕೆ ಬೇನಾಳ್ )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.